



ರಕ್ಷಿಸಿಕೊಳ್ಳಬಹುದು.

ಮಳೆಗಾಲ ಬಂತೆಂದರೆ ಕಚೇರಿ, ಶಾಲೆ, ನಿತ್ಯದ ಕೆಲಸಗಳಿಗೆ ಹೋಗುವವರಿಗೆ ರಕ್ಷಾ ಕವಚಗಳಾಗಿವೆ ರೇನ್‌ಕೋಟ್‌ಗಳು. ಹಿಂದೆಲ್ಲ ಮೈ ಪೂರ್ತಿ ಮುಚ್ಚುವಂತಹ ಪ್ಲಾಸ್ಟಿಕ್ ರೇನ್‌ಕೋಟ್‌ಗಳು ಮಾತ್ರವೇ ಸಿಗುತ್ತಿದ್ದವು. ಈಗ ಫ್ಯಾಷನ್ ಜಗತ್ತಿನಲ್ಲಿ ರೇನ್‌ಕೋಟ್‌ಗಳೂ ವಿನ್ಯಾಸ ಬದಲಿಸಿಕೊಂಡು ಎಲ್ಲ ವಯೋಮಾನದವರನ್ನೂ ಆಕರ್ಷಿಸುತ್ತಿವೆ. ಕ್ರೀಡೆ, ಕಾಲೇಜು, ಕಚೇರಿ, ಶಾಲೆ, ಪ್ರವಾಸ ಹೀಗೆ ವಿವಿಧ ಉದ್ದೇಶಗಳಿಗಾಗಿ ಹೊರಗೆ ಹೋಗುವವರಿಗೆ ಅಗತ್ಯಕ್ಕೆ ತಕ್ಕಂತೆ ರೇನ್‌ಕೋಟ್‌ಗಳು ತಮ್ಮ ಛಾಯೆ ಹೆಚ್ಚಿಸಿಕೊಳ್ಳುತ್ತ ವಿನ್ಯಾಸಕರ ಕೈಯಲ್ಲಿ ರೂಪುತಳೆದಿವೆ. ಕೋಟ್‌ನ ಮೇಲ್ಭಾಗ ಪ್ಲಾಸ್ಟಿಕ್, ರಬ್ಬರ್ ಅಥವಾ ಚರ್ಮದಿಂದ ತಯಾರಾದರೆ ಒಳಭಾಗ ಬೆಚ್ಚಗಿನ ಅನುಭವ ನೀಡಲು ಲೆನಿನ್, ಕಾಟನ್, ಉಣ್ಣೆಯಿಂದ ತಯಾರಿಸಲಾಗುತ್ತದೆ.

ಫ್ಯಾಷನ್ ಜಗತ್ತಿನ ಓಘದಲ್ಲಿ ಸುಮ್ಮನೇ ಒಂದು ರೇನ್‌ಕೋಟ್ ಧರಿಸಿದರೆ ಆಗುತ್ತದೆಯೇ? ಸಮಯ, ಸಂದರ್ಭ, ಭೇಟಿ ನೀಡುವ ಸ್ಥಳಕ್ಕೆ ಹೊಂದುವಂತಹ ರೇನ್‌ಕೋಟ್ ತೊಟ್ಟರೇನೆ ಚೆನ್ನ. ರೇನ್‌ಕೋಟ್‌ನಲ್ಲೂ ಟ್ರೆಂಡಿಯಾಗಿರಲು ಬಯಸುತ್ತದೆ ಯುವ ಮನ.

ಯುವತಿಯರು ಸ್ಕೂಟಿಯಲ್ಲಿ ಕಾಲೇಜು ಅಥವಾ ಉದ್ಯೋಗಕ್ಕೆ ಹೋಗುತ್ತಿರುವಿರಾದರೆ ಮೊಳಕಾಲು ಕೆಳಗಿನವರೆಗಿನ ರೇನ್‌ಕೋಟ್ ಬಳಸಬಹುದು. ರೆಕ್ಸಿನ್ ಕೋಟ್ ನಿಮ್ಮ ಆಯ್ಕೆಯಾಗಿರಲಿ. ಕಾಲೇಜು ಯುವತಿಯರಿಗೆ ಟ್ರೆಂಚ್ ಕೋಟ್ ಹೆಚ್ಚು ಹೊಂದುತ್ತದೆ. ಮೊಳಕಾಲಿಗಿಂತ ಮೇಲಕ್ಕೆ, ಮೊಳಕಾಲಿನ ಕೆಳಭಾಗದವರೆಗೆ ಹಾಗೂ ಪಾದದಿಂದ ಸ್ವಲ್ಪ ಮೇಲ್ಮಟ್ಟದವರೆಗೆ... ಹೀಗೆ ವಿವಿಧ ಅಳತೆಯ ಕೋಟ್‌ಗಳು ಮಾರುಕಟ್ಟೆಯಲ್ಲಿವೆ. ಬೆಲ್ಟ್ ಇರುವ ಟ್ರೆಂಚ್ ಕೋಟ್‌ಗಳು ಹೆಚ್ಚು ಆಕರ್ಷಕವಾಗಿ ಕಾಣುತ್ತವೆ. ಉಣ್ಣೆಯಿಂದ ತಯಾರಾದ ಈ ಕೋಟ್‌ಗಳು ಹೆಚ್ಚು ಆರಾಮದಾಯಕ ಎಂದೆನಿಸುತ್ತವೆ. ಸೀರೆ, ಕುರ್ತಾ, ಜೀನ್ಸ್ ಮೇಲೆ ಈ ಕೋಟ್‌ಗಳನ್ನು ಹಾಕಬಹುದು.

ರಿವರ್ಸಬಲ್ ಕೋಟ್‌ಗಳು ಈಗ ಹೆಚ್ಚು ಟ್ರೆಂಡಿಯಾಗಿವೆ. ಈ ಕೋಟ್‌ಗಳನ್ನು ಹಿಂದೆ– ಮುಂದೆ ಮಾಡಿ ಧರಿಸಬಹುದು. ಒಳಭಾಗ, ಹೊರಭಾಗ ಎರಡೂ ಬೇರೆ ಬೇರೆ ವಿನ್ಯಾಸ, ಬಣ್ಣವಿರುತ್ತದೆ. ಡ್ರೆಸ್‌ಗೆ ಹೊಂದುವಂತಹ ಬಣ್ಣದ ಕೋಟ್ ಧರಿಸಿ ಬೀಗಬಹುದು. ಕೊಟ್ಟ ಕಾಸಿಗೆ ಎರಡು ಬಗೆಯ ಕೋಟ್‌ಗಳು ಬಂದಂತಾಗುತ್ತದೆ. ಕ್ಯಾಶುವಲ್ ಹಾಗೂ ಫಾರ್ಮಲ್ ಎರಡೂ ಬಗೆಯ ಉಡುಪಿಗೂ ಇದು ಹೊಂದುತ್ತದೆ.

ಸ್ಪೋರ್ಟ್ಸ್ ರೇನ್‌ಕೋಟ್‌ಗಳು ಕಾಲೇಜು ಯುವಕ– ಯುವತಿಯರಿಗೆ ಹೆಚ್ಚು ಹೊಂದುತ್ತವೆ. ಜರ್ಕಿನ್, ಸ್ವೆಟರ್ ರೀತಿ ಕಾಣುವುದರಿಂದ ಆಕರ್ಷಕ ಲುಕ್ ನೀಡುತ್ತವೆ. ವೈವಿಧ್ಯಮಯ ಬಣ್ಣದ ಆಯ್ಕೆಯೂ ಈ ಬಗೆಯ ರೇನ್‌ಕೋಟ್‌ಗಳಲ್ಲಿರುತ್ತವೆ. ಪ್ಯಾಂಟ್ ವಿತ್ ಕೋಟ್ ಹುಡುಗರಿಗೆ ಹೆಚ್ಚು ಆಪ್ಯಾಯಮಾನವಾಗುತ್ತವೆ.

ಇನ್ನು ಪೋನ್ಚೊ ರೇನ್‌ಕೋಟ್‌ಗಳೂ ಬಹಳ ಕಾಲದಿಂದ ಮಾರುಕಟ್ಟೆಯಲ್ಲಿ ಇವೆ. ಇದರಲ್ಲಿ ರೆಕ್ಕೆಯಂತೆ ಕಾಣುವ ವಿನ್ಯಾಸಕ್ಕೆ ಬೇಡಿಕೆ ಹೆಚ್ಚು. ತಲೆಯಿಂದ ಪಾದದವರೆಗಿನ ರೇನ್‌ಕೋಟ್‌ಗಳು ಈ ಮಾದರಿಯಲ್ಲಿ ಲಭ್ಯ. ಬೆನ್ನ ಹಿಂದಿನ ಬ್ಯಾಗನ್ನೂ ಈ ಬಗೆಯ ರೇನ್‌ಕೋಟ್‌ನಲ್ಲಿ ರಕ್ಷಣೆ ಮಾಡಿಕೊಳ್ಳಬಹುದು. ಆದರೆ, ಇದು ಹೆಚ್ಚು ಫ್ಯಾಷನೆಬಲ್ ಎನಿಸಿಕೊಂಡಿಲ್ಲ.

ರೇನ್‌ಕೋಟ್ ಕೊಳ್ಳುವ ಮುನ್ನ ನಮಗಾವ ಕೋಟ್ ಹೊಂದಿಕೆಯಾಗುತ್ತದೆ ಎಂದು ಅವಲೋಕಿಸಿಕೊಳ್ಳಬೇಕು.

ಚಂದ ಕಾಣುತ್ತದೆಂದು ದುಬಾರಿ ಬೆಲೆ ತೆತ್ತು ಕೊಂಡರೆ ದೇಹಕ್ಕೆ ಹೊಂದಿಕೆ ಆಗದಿರಲೂಬಹುದು. ಆಸಕ್ತಿ, ಅಭಿರುಚಿ, ಅವಶ್ಯಕತೆಗೆ ತಕ್ಕಂತೆ ರೇನ್‌ಕೋಟ್‌ಗಳ ಆಯ್ಕೆ ಇರಲಿ.

- ಸೀರೆ ಹಾಕಿಕೊಳ್ಳುವವರು ನಡುವೆ ಗುಂಡಿ ಅಥವಾ ಜಿಪ್ ಇರುವ ಕೋಟ್ ಆಯ್ಕೆ ಮಾಡಿಕೊಳ್ಳಿ. ಇವು ನಡೆಯುವಾಗ ಕಷ್ಟವೆನಿಸುವುದಿಲ್ಲ. ಲೋವೇಸ್ಟ್, ಮಂಡಿವರೆಗೆ ಅಥವಾ ಮೊಣಕಾಲಿಗಿಂತಲೂ ಕೆಳಗಿನವರೆಗೆ ಇರುವ ಕೋಟ್ ಧರಿಸಬಹುದು.
- ಸೀರೆ ಉಡುವವರು ಆದಷ್ಟು ತಿಳಿ ಬಣ್ಣದ ರೇನ್‌ಕೋಟ್ ಕೊಳ್ಳಿ. ಇಲ್ಲವಾದರೆ ದೇಸಿ ಲುಕ್ ನೀಡುವುದಿಲ್ಲ.
- ಪುರುಷರು ಆದಷ್ಟು ಗಾಢ ಬಣ್ಣದ ಕೋಟ್‌ಗಳಿಗೆ ಆದ್ಯತೆ ನೀಡುವುದು ಒಳಿತು. ಕಪ್ಪು, ಕಡು ನೀಲಿ, ಕಂದು ಬಣ್ಣದ ರೇನ್‌ಕೋಟ್ ಹೆಚ್ಚು ಹೊಂದುತ್ತವೆ.
- ಮಕ್ಕಳಿಗೆ ಗಾಢ ಬಣ್ಣದ ಜೊತೆಗೆ ಕಾರ್ಟೂನ್ ಚಿತ್ರಗಳು ಅಚ್ಚೊತ್ತಿರುವ ಕೋಟ್ ಹೊಂದುತ್ತವೆ. ಈ ಬಗೆಯ ರೇನ್‌ಕೋಟ್‌ಗಳಲ್ಲಿ ಚಿಕ್ಕಮಕ್ಕಳು ಹೆಚ್ಚು ಮುದ್ದಾಗಿ ಕಾಣುತ್ತವೆ.
- ಉದ್ಯೋಗಿಗಳಾಗಿದ್ದರೆ ಬ್ಯಾಗ್‌ನಲ್ಲಿ ಮಡಚಿಟ್ಟುಕೊಳ್ಳಬಹುದಾದ, ಹಗುರವಾದ ರೇನ್‌ಕೋಟ್ ಆಯ್ಕೆ ಸೂಕ್ತ.
- ನೀವು ವಾಸಿಸುವ ವಾತಾವರಣಕ್ಕೆ ತಕ್ಕಂತೆ ರೇನ್‌ಕೋಟ್ ಆಯ್ಕೆ ಮಾಡಿಕೊಳ್ಳಿ. ಹೆಚ್ಚು ಮಳೆ ಬೀಳುವ, ಹೆಚ್ಚು ಶೀತ ಪ್ರದೇಶವಾಗಿದ್ದರೆ ವಾಟರ್‌ಪ್ರೂಫ್ ಹಾಗೂ ಒಳಭಾಗದಲ್ಲಿ ಉಣ್ಣೆ, ಕಾಟನ್ ಬಟ್ಟೆಯ ರೇನ್‌ಕೋಟ್ ಹಿತಕರ.
- ನಿತ್ಯದ ಚಟುವಟಿಕೆಗಳಿಗೆ ತಕ್ಕಂತೆ ರೇನ್‌ಕೋಟ್‌ಗಳ ಆಯ್ಕೆ ಇರಲಿ. ಮಳೆಯಲ್ಲೇ ಓಡಾಡುತ್ತ ಕೆಲಸ ಮಾಡುವುದಿದ್ದರೆ, ಕಚೇರಿಗೆ ಹೋದ ಬಳಿಕ ಕೋಟ್ ತೆಗೆದಿಡುವಂತಿದ್ದರೆ, ದಿನವಿಡೀ ಹಾಕಿಕೊಂಡೇ ಕೆಲಸ ಮಾಡುವ ಅನಿವಾರ್ಯತೆ ಇದ್ದರೆ ಅಗತ್ಯಕ್ಕೆ ತಕ್ಕಂತೆ ಕೋಟ್ ಕೊಂಡುಕೊಳ್ಳುವುದು ಒಳಿತು. ■

## ಛತ್ರಿಯೊಂದಿಗೆ ಭಾವಬಿತ್ತಿ



ರೇನ್‌ಕೋಟ್‌ಗಳು ಮಳೆಗಾಲದಲ್ಲಿ ರಕ್ಷಾ ಕವಚದಂತಿದ್ದರೂ ಮಳೆ ಜೊತೆಗೆ ಛತ್ರಿ ಹಿಡಿದು ಹೆಜ್ಜೆ ಹಾಕಿದರೇನೆ ಮಳೆಹನಿಯ ಕಹಾನಿ ಮನಕ್ಕೆ ಇಳಿಯುವುದು. ಇಂತಹವರಿಗೂ ಕೊಡೆಗಳು ಮಾರುಕಟ್ಟೆಯಲ್ಲಿ ಟ್ರೆಂಡ್ ಸೃಷ್ಟಿಸಿವೆ.

ಬಹು ಹಿಂದೆ ಬಳಕೆಯಾಗಿ ತೆರೆಮರೆಗೆ ಸರಿದಿದ್ದ ಉದ್ದನೆ ಛತ್ರಿಗಳು ಈಗ ಹೊಸವಿನ್ಯಾಸ, ವೈವಿಧ್ಯ, ಬಣ್ಣದೊಂದಿಗೆ ಮುನ್ನೆಲೆಗೆ ಬಂದಿವೆ. ಮಳೆ ಬಾರದಿದ್ದಾಗಲೂ ಉದ್ದನೆ ಕೊಡೆಯ ಹಿಡಿಯನ್ನು ಕೈಗೆ ಸಿಕ್ಕಿಸಿಕೊಂಡು ಹೋಗುವುದು ಟ್ರೆಂಡ್ ಆಗಿದೆ. ರಂಗುರಂಗಿನ ಬಣ್ಣಗಳಲ್ಲಿ ಅವತರಿಸಿದ ಈ ಛತ್ರಿಗಳು ಮಕ್ಕಳಿಂದ ಹಿಡಿದು ಯುವಕ– ಯುವತಿಯರಿಗೂ ಅಚ್ಚುಮೆಚ್ಚು.

ಮಕ್ಕಳಿಗಾಗಿ ಮಿಕ್ಕಿಮೌಸ್ ಕಿವಿಗಳಿರುವ ಛತ್ರಿಗಳ ವಿನ್ಯಾಸ ಹೆಚ್ಚು ಆಕರ್ಷಕವೆನಿಸಿವೆ. ಇನ್ನು ಉದ್ಯೋಗ, ಪ್ರಯಾಣ ಹೋಗುವವರಿಗೆ ತ್ರಿಫೋಲ್ಡ್ ಛತ್ರಿಗಳು ಹೆಚ್ಚು ಉಪಯುಕ್ತ. ಬ್ಯಾಗ್‌ನಲ್ಲಿ ಇಟ್ಟುಕೊಂಡು ಸುಲಭದಲ್ಲಿ ಕೊಂಡೊಯ್ಯಬಹುದಾದ ಈ ಕೊಡೆಗಳಿಗೆ ಹೆಚ್ಚು ಬೇಡಿಕೆ ಇದೆ.

ಇನ್ನು ಬಬಲ್ ಕೊಡೆಗಳೂ ಟ್ರೆಂಡ್ ಸೃಷ್ಟಿಸಿವೆ. ಇವು ಪಾರದರ್ಶಕವಾಗಿದ್ದು, ಮುಗಿಲಿನಿಂದ ಬೀಳುವ ಮಳೆಹನಿಗಳನ್ನು ಆಸ್ವಾದಿಸುತ್ತ ಸಾಗಬಹುದು. ಪ್ರವಾಸ ಕೈಗೊಂಡಾಗ ಇಂತಹ ಕೊಡೆಗಳು ಹೆಚ್ಚು ಹಿಡಿಸುತ್ತವೆ. ಆದೇನೆ ಇರಲಿ, ಮಳೆ ಆಸ್ವಾದಿಸಲು, ಸಂಗಾತಿಗಳು ಜೊತೆಯಾಗಿ